ಬಟ್ಟೆಯನ್ನು ಸರಿಸಿದ ಒಬ್ಬ ಕೆಲಸಗಾರ. ಮರಳಿನಲ್ಲಿ ಆಳದವರೆಗೂ ಹೂತು ಹೋದ ಬಟ್ಟೆಯನ್ನು ಬಲ ಹಾಕಿ ಎಳೆದಾಗ ಹರಿಯಿತು.

'ಬಟ್ಟೆ ಆಳದವರೆಗೂ ಇದೆ. ಹೀಗೆ ಎಳೆದರೆ ಒಳಗಿರುವ ಹೆಣ ಚೂರು ಚೂರಾಗಿ ಹೊರಗೆ ಬರಬಹುದು' ಕೆಲಸದವನ ಮಾತಿಗೆ ಇನ್ಸ್‌ಪೆಕ್ಟರ್‌ಗೆ ಮತ್ತೆ ಅನುಮಾನ ಕಾಡಿತು.

'ಇಲ್ಲಿರೋ ದೇಹವನ್ನು ಬೆಳದಿಂಗಳ ರಾತ್ರಿಯಲ್ಲಿ ದೋಣಿಗೆ ಸಾಗಿಸಿ ಹೊತ್ತೊಯ್ದದ್ದು ನಿಮಗೆ ಗೊತ್ತೇ ಇದೆ. ಮತ್ತೆ ಇಲ್ಲಿ ಹೆಣ ಇರುವ ಸಾಧ್ಯತೆ ಇದೆಯೇ?'

'ಹೇಳೋಕಾಗೋದಿಲ್ಲ. ಈ ಮರಳು ದಿಣ್ಣೆ ಕೌತುಕದ ಲೋಕ. ಇಲ್ಲಿ ಸಮುದ್ರದ ಆಳದಲ್ಲಿರುವ ರಹಸ್ಯಗಳಿಗಿಂತಲೂ ಅಧಿಕವಾದ ನಿಗೂಢತೆಗಳು ಅಡಗಿವೆ'. ಕೆಲಸಗಾರನ ಮಾತನ್ನು ಕೇಳಿ ಇನ್ಸ್‌ಪೆಕ್ಟರ್‌ನ ಹುಬ್ಬು ಮೇಲಕ್ಕೇರಿತು. ಅವನ ಮಾತಿನಲ್ಲಿ ಸುಳ್ಳಿರಲಿಲ್ಲ.

ಇನ್ಸ್‌ಪೆಕ್ಟರ್ ರಾಜಧಾನಿ ಅಲ್ಲಿಗೆ ವರ್ಗವಾಗಿ ಬಂದ ಮೇಲೆ ನಾಲ್ಕೈದು ಹೆಣಗಳನ್ನು ಸಮುದ್ರದಿಂದ ಮೇಲಕ್ಕೆತ್ತಿದ್ದ. ಅದು ಮರಳು ದಿಣ್ಣೆಯಲ್ಲಿ ಹೂತು ಹೋಗುವ ಸಂಭವವಿತ್ತು. ಯಾವ ಕೇಸನ್ನು ಬಿದ್ದು ಹೋಗಲು ಬಿಡದೆ ಕೂಡಲೇ ಅಪರಾಧಿಗಳನ್ನು ಹಿಡಿದು ಇಲಾಖೆಯ ಮೇಲ್ವರ್ಗದ ಪ್ರಶಂಸೆಗೆ ಪಾತ್ರನಾಗಿದ್ದ.

'ಸರಿ, ಹಾಗಾದರೆ ಇಲ್ಲಿ ಆಳಕ್ಕೆ ಅಗೆದು ನೋಡಿ' ಅವನ ಅಣತಿಯನ್ನು ಮೀರಲಾಗಲಿಲ್ಲ. ಅವರಲ್ಲಿ ಒಬ್ಬಾತ ಓಡಿ ಹೋಗಿ ಪಕ್ಕದ ಮನೆಯಿಂದ ಹಾರೆ, ಗುದ್ದಲಿಯನ್ನು ತಂದ. ಮರಳ ದಿಣ್ಣೆಯನ್ನು ಅಗೆಯುವುದು ಕಷ್ಟವೆನಿಸಲಿಲ್ಲ. ಸಣ್ಣ ಪುಟ್ಟ ಏಡಿಗಳ ಹರಿದಾಟ ಬಿಟ್ಟರೆ ಬೇರೇನೂ ತೊಂದರೆಗಳಿರಲಿಲ್ಲ. ದೋಣಿಯನ್ನು ನಿಲ್ಲಿಸಿದ ಅಡಿಭಾಗದವರೆಗೂ ಅಗೆದರೂ ಯಾವುದೇ ಕುರುಹು ಸುಳಿಯಲಿಲ್ಲ. ತಿಳಿ ಆಕಾಶ ಬಣ್ಣದ ಮಾಸಲು ಬಟ್ಟೆ ಮಾತ್ರ ಅಲ್ಲಿತ್ತು. ಅಲ್ಲಿ ಕಂಡ ವಿಷಯಗಳನ್ನೆಲ್ಲಾ ನೋಟ್ ಮಾಡಿಕೊಂಡು ಕೆಲಸಗಾರರಿಗೆ ಕೃತಜ್ಞತೆಯನ್ನು ಸೂಚಿಸಿದ.

'ಮತ್ತೆ ನಿಮ್ಮನ್ನು ಮರಳು ದಿಣ್ಣೆಯಲ್ಲಿ ಭೇಟಿ ಮಾಡ್ತೀನಿ. ಯಾವುದಾದರೂ ಮಾಹಿತಿ ಸಿಕ್ಕಿದಲ್ಲಿ ಸ್ಟೇಶನ್‌ಗೆ ಬಂದು ತಿಳಿಸಿ'

ಇನ್ಸ್ ಪೆಕ್ಟರ್‌ನ ಮಾತಿಗೆ ತಲೆಯಲುಗಿಸಿ ಒಪ್ಪಿಗೆಯಿತ್ತ ಮೂವರು ಲಂಗರು ಹಾಕಿದ ತಮ್ಮ ಮೀನಿನ ದೋಣಿಯತ್ತ ನಡೆದರು.

ಇನ್ಸ್‌ಪೆಕ್ಟರ್‌ನ ತನಿಖೆಗೆ ಮತ್ತೊಂದು ಸಾಕ್ಷ್ಯ ದೊರಕಿತು.

'ಪಿಸಿ, ಲಹರಿ ಜೀವಂತವಾಗಿಲ್ಲ ಅನ್ನೋದು ಇದರಿಂದ ಸ್ಪಷ್ಟವಾಯಿತಲ್ಲವೆ?'

ಸಾರಂಗನಿಗೆ ಅದೇನೋ ಅನುಮಾನ ಕಾಡಿತು. ಇಲ್ಲಿ ಕಂಡ ಸಾಕ್ಷ್ಯಗಳೆಲ್ಲ ಬರೀ ಸಾಕ್ಷ್ಯಗಳಲ್ಲ. ಇವುಗಳ ಹಿಂದೆ ಮತ್ತಿನ್ನೇನೋ ಕರಾಮತ್ತು ನಡೆದಿದೆ. ಪಾಂಬು ಕಂಡಷ್ಟು ಸಾಧು ವ್ಯಕ್ತಿಯಲ್ಲ. ಸುಳ್ಳು ಸಾಕ್ಷಿಗಳನ್ನು ಸೃಷ್ಟಿಸಿ ನಿಜ ಸಾಕ್ಷಿಗಳನ್ನು ಮರೆ ಮಾಡುವ ಚಾಣಾಕ್ಷ ಅವನು. ಅದನ್ನು ಬಹಳ ಹಿಂದೆಯೇ ಅವನು ತಿಳಿದುಕೊಂಡಿದ್ದ. ಈಗ ಅಧಿಕಾರಿ ಕೇಳುವ ಪ್ರಶ್ನೆಗೆ ನೇರವಾಗಿ ಉತ್ತರಿಸುವುದು ಸುಲಭವಲ್ಲ. ಹಾಗಾಗಿ ತನ್ನ ಅನುಮಾನವನ್ನು ಹೇಳಿಕೊಳ್ಳಲೇಬೇಕಿತ್ತು.

'ಈ ಸಾಕ್ಷಿಗಳೆಲ್ಲಾ ಸುಳ್ಳು ಅನಿಸ್ತಿದೆ. ಇದೆಲ್ಲಾ ನೋಡುಗರ ಕಣ್ಣಿಗೆ ಮಣ್ಣು ಎರಚುವ ಕೆಲಸ ಅಷ್ಟೆ. ನಿಜವಾದ ವಿಷಯ ಬೇರೆಯದೇ ಇದೆ'

'ಇದು ಮಣ್ಣೆರಚುವ ಕೆಲಸ ಅಲ್ಲ. ಮರಳು ಎರಚುವ ಕೆಲಸ. ಬೆಳದಿಂಗಳ ಬೆಳಕಿನಲ್ಲಿ ಹಾಗೆ ಹೆಣವನ್ನು ಸಾಗ ಹಾಕುವ ಮೂರ್ಖ ಆ ದೇಹವನ್ನು ಕೊಲೆ ಮಾಡಿದವನು ಅಲ್ಲ'

ಇನ್ಸ್‌ಪೆಕ್ಟರ್‌ನ ಮಾತುಗಳು ಅರ್ಥವಾಗದೆ ಪಿಸಿ ಸಾರಂಗ ಪ್ರಶ್ನಾರ್ಥಕ ನೋಟ ಬೀರಿದ ಅವನತ್ತ.

'ಅಂದ್ರೆ, ಕೊಲೆಗಾರ ಹೆಣವನ್ನು ಎಲ್ಲರೂ ನೋಡುವ ಹಾಗೆ ದೋಣಿಯಲ್ಲಿ ಎತ್ತೊಯ್ದು ಸಮುದ್ರಕ್ಕೆ ಹಾಕಲಾರ. ಸಮುದ್ರಕ್ಕೆ ಹಾಕಿದ ದೇಹ ದಡಕ್ಕೆ ಬಂದು ಬೀಳೋದು ಎಲ್ಲರಿಗೂ ಗೊತ್ತಿರೋ ಸಮಾಚಾರ. ನಮ್ಮ ಠಾಣೆಯಲ್ಲಾಗಲಿ ಅಥವಾ ನಮಗೆ ತಿಳಿದಂತೆ ಮೂರು ನಾಲ್ಕು ತಿಂಗಳ ಹಿಂದಿನಿಂದ ಯಾವ ಹೆಣನೂ ಮರಳು ದಿಣ್ಣೆಯ ಮೇಲೆ ಬಿದ್ದಿಲ್ಲ. ಅಂದ್ರೆ ಹೆಣಾನ ಸಮುದ್ರಕ್ಕೆ ಎಸೆಯಲಿಲ್ಲ ಅನ್ನೋದು ಸತ್ಯ' ಇನ್ಸ್‌ಪೆಕ್ಟರ್ ಪಿಸಿಗೆ ಅರ್ಥವಾಗುವಂತೆ ತಿಳಿಸಿದ.

'ಇನ್ನು ನಾವು ಲಹರಿಯ ಫೈಲ್ ತೆಗೆದು ದಾಖಲೆಗಳನ್ನು ಮತ್ತೊಮ್ಮೆ ಪರಿಶೀಲಿಸಬೇಕಿದೆ. ಮುಖ್ಯವಾದ ವಿಷಯಗಳನ್ನು ಮತ್ತೊಮ್ಮೆ ನಾವು ನೋಡಬೇಕು. ಆಗ ಇಲ್ಲಿಯ ವಿವರಗಳು ಅದರೊಂದಿಗೆ ತಾಳೆಯಾದರೆ ಪಾಂಬುವನ್ನು ಬೆನ್ನಟ್ಟಬೇಕು. ಇನ್ನು ಮುಂದೆ ಆತನ ಚಲನವಲನಗಳನ್ನು ಗಮನಿಸಲು ಒಬ್ಬ ಪಿಸಿಯನ್ನು ಇಡಬೇಕಾದೀತು'

'ಆ ಕೆಲಸವನ್ನು ನಾನೇ ಮಾಡಬಲ್ಲೆ' ಆಸಕ್ತಿ ತೋರಿಸಿದ ಪಿಸಿ.

'ಸರಿ, ಪಾಂಬು ನಮ್ಮ ಕೈ ತಪ್ಪಿಸಿ ಹೋಗಬಾರದು. ಅವನನ್ನು ಹೇಗಾದರು ಮಾಡಿ ಬಾಯಿ ಬಿಡಿಸ್ಬೇಕು. ಲಹರಿಯ ಕಣ್ಮರೆಯಲ್ಲಿ ಪಾಂಬು ಹೇಳಿದ ಹುಡುಗನಿಗಿಂತ ಪಾಂಬುವಿನದ್ದೇ ಕೈವಾಡ ಹೆಚ್ಚಾಗಿದೆ. ಮರಿಬೇಡ' ಎಚ್ಚರಿಕೆಯ ಮಾತುಗಳನ್ನು ಹೇಳಿದ.

ಅರ್ಧಗಂಟೆಯಲ್ಲಿ ಇಬ್ಬರೂ ಸ್ಟೇಶನ್ ತಲುಪಿದರು. ಇನ್ಸ್‌ಪೆಕ್ಟರ್ ಆಸಕ್ತಿಯಿಂದ ಲಹರಿಯ ಫೈಲ್ ತೆಗೆಸಿದ. ಪಿಸಿ ಸಾರಂಗ ಇನ್ಸ್‌ಪೆಕ್ಟರ್‌ನ ಸಹಾಯಕ್ಕೆ ನಿಂತ.

'ನೋಡು, ಆ ದಿನ ಅಂದರೆ ಲಹರಿ ಕಣ್ಮರೆಯಾದ ದಿನ ಅವಳು ಉಟ್ಟಿದ್ದ ಬಟ್ಟೆ ಆಕಾಶ ನೀಲಿ ಬಣ್ಣದ ಸಲ್ವಾರ್ ಅನ್ನೋದು ಇಲ್ಲಿ ಕಾಶಮ್ಮನ ಹೇಳಿಕೆಯಲ್ಲಿದೆ. ಈಗ ನಮಗೆ ದೊರೆತಿರುವ ಬಟ್ಟೆ ಕೂಡ ಆಕಾಶ ನೀಲಿ ಬಣ್ಣದ್ದೇ ಅಲ್ಲವೆ?' ಅಧಿಕಾರಿಗೆ ಆ ಬಿಳಿಚಿಕೊಂಡ ಬಣ್ಣದ ಮೇಲೆ ಸಂಶಯವಿತ್ತು.

'ಹೌದನ್ಸುತ್ತೆ, ಇದು ಅದೇ ಬಣ್ಣದ್ದಾಗಿರಬೇಕು. ಸೂರ್ಯನ ಬೆಳಕಿಗೆ ಬಣ್ಣ ಮಾಸಿರಬೇಕು. ಇನ್ನೊಂದು ಸಮುದ್ರದಲ್ಲಿ ದೊರೆತ ಬಟ್ಟೆ ಕೂಡ ಕಡು ನೀಲಿ ಬಣ್ಣ ಪಡೆದುಕೊಂಡಿದೆ. ಇವೆರಡರ ಮೇಲಿರುವ ಅಚ್ಚು ಮಾತ್ರ ಒಂದೇ ತೆರನದ್ದು' ಅಧಿಕಾರಿಯ ಸಂದೇಹವನ್ನು ಪರಿಹರಿಸುವಂತೆ ಪಿಸಿ ಉತ್ತರಿಸಿದ.

ಅಧಿಕಾರಿ ಎಲ್ಲವನ್ನೂ ಫೈಲ್‌ನಲ್ಲಿ ಬರೆದುಕೊಂಡ.

'ಈಗ ನಮಗೆ ಪಾಂಬುವಿನ ಹೇಳಿಕೆ ಮುಖ್ಯ. ಜೊತೆಗೆ ನಾವು ಕಾಕುಟ್ಟನನ್ನು ಕೂಡ ವಿಚಾರಿಸುವುದು ಒಳ್ಳೆಯದು. ಆದರೆ ಆತ ಹೈದರಾಬಾದ್‌ಗೆ ಹೋಗಿರುವುದರಿಂದ ಸದ್ಯಕ್ಕಂತು ಸಾಧ್ಯವಿಲ್ಲ ಅನ್ಸುತ್ತೆ'

ತಕ್ಷಣವೇ ಅಧಿಕಾರಿಯ ಮೆದುಳಿಗೆ ಏನೋ ಹೊಳೆಯಿತು.

'ಪಿಸಿ, ನಿನಗೊಂದು ಕೆಲಸವನ್ನು ವಹಿಸಿದ್ದೆನಲ್ಲವೆ? ಮರೆತು ಬಿಟ್ಟೆಯಾ?'

ಪಿಸಿ ಸಾರಂಗ ತಲೆಗೊಂದು ಮೊಟಕಿಕೊಂಡು ನೆನಪಿಸಿಕೊಂಡ.

'ಹೌದು, ನೆನಪಿದೆ. ಭುಜಂಗೇಶರಾಯರಿಗೆ ಫೋನ್ ಮಾಡಿ ತಿಳಿದುಕೊಳ್ಳುವುದಲ್ಲವೆ?'

'ಸರಿ, ನಿನ್ನ ಜ್ಞಾಪಕ ಶಕ್ತಿ ಚೆನ್ನಾಗಿದೆ. ಮೊದಲು ಆ ಕೆಲಸವನ್ನು ಪೂರೈಸು'

ಪಿಸಿ ಅಧಿಕಾರಿಯ ಮೇಜಿನ ಮೇಲಿದ್ದ ಟೆಲಿಫೋನನ್ನು ಕೈಗೆತ್ತಿಕೊಂಡ. ಲಹರಿಯ ಫೈಲ್‌ನಲ್ಲಿದ್ದ ಭುಜಂಗೇಶರಾಯರ ಬಂಗಲೆಯ ಟೆಲಿಫೋನ್ ಸಂಖ್ಯೆಗೆ ಡಯಲ್ ಮಾಡಿದ. ಅತ್ತ ಕಡೆಯಿಂದ ಯಾರೋ ಫೋನು ಎತ್ತಿದ ಸದ್ದಾಗುತ್ತಲೇ ಕೇಳಿದ.

'ಇದು ಭುಜಂಗೇಶರಾಯರ ಸಂಖ್ಯೆಯಲ್ಲವೆ? ಅವರು ಹೈದರಾಬಾದ್‌ನಿಂದ ಹಿಂತಿರುಗಿದ್ದಾರೆಯೆ?'

ಹಿಂತಿರುಗಿರುವ ಸುದ್ದಿ ತಿಳಿಯಿತು. ಫೋನನ್ನು ಯಥಾ ಸ್ಥಾನದಲ್ಲಿಟ್ಟ ಪಿಸಿ ಅಧಿಕಾರಿಗೆ ತಿಳಿಸಿದ. ಇನ್ಸ್‌ಪೆಕ್ಟರ್ ಅವನೆಲ್ಲಾ ಫೈಲ್‌ನಲ್ಲಿ ದಾಖಲಿಸಿಕೊಂಡ. ಸಾಧಾರಣವಾಗಿ ಈಗ ಲಹರಿಯ ಕೇಸ್‌ಗೆ ಒಳ್ಳೆಯ ತಿರುವು ಸಿಕ್ಕಿತು. ಅಪರಾಧಿಯನ್ನು ಇನ್ನೇನು ಸ್ವಲ್ಪ ದಿವಸದಲ್ಲಿಯೇ ಹಿಡಿಯಬಲ್ಲೆನೆನ್ನುವ

## ಕಣ್ಣೀರು

ಮನಸ್ಸಿಗೆ ಬೆಂಕಿ ಬಿದ್ದಾಗ
ತಕ್ಷಣಕ್ಕೆ ನೀರು ಸಿಗಲ್ಲ
ಎಂದು ತಿಳಿದ ದೇವರು
ಕಣ್ಣಲ್ಲೇ ನೀರನ್ನಿಟ್ಟ..

★ **ವಿ. ಹೇಮಂತ ಕುಮಾರ**


ಈಶ್ವರ